**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸೆಷನ್ಸ್ ಕೇಸ್ ನಂ. 17/2018**

**ದೋ.ಸಾ. :5 ಫ್ರಾ.ಸಾ. : 8**

ಸಾಕ್ಷಿಯ ಹೆಸರು : ಅಣ್ಣಪ್ಪ ಕೊಗ್ಗ ಶೇಠ
ತಂದೆಯ ಹೆಸರು : ಕೊಗ್ಗ ಶೇಠ
ವಯಸ್ಸು : 48 ವರ್ಷ
ಉದ್ಯೋಗ : ಚಿನ್ನದ ಕೆಲಸ.
ವಾಸ : ಸೋನಾರ್ ಕೇರಿ ಭಟ್ಕಳ.

**ದಿನಾಂಕಃ 27-08-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಪರಿಚಯ ಇದ್ದಾನೆ. 5-6 ವರ್ಷಗಳ ಹಿಂದೆ ಭಟ್ಕಳ ನಗರ ಠಾಣೆ ಪೊಲೀಸನವರು ನನ್ನ ಸಹಿ ಪಡೆದಿದ್ದಾರೆ. ನನ್ನನ್ನು ಠಾಣೆಗೆ ಕರೆದಿಲ್ಲ. ನನ್ನ ಮನೆ ಬಳಿ ಬಂದು ನನ್ನ ಸಹಿ ಪಡೆದರು. ನನ್ನ ಸಮಕ್ಷಮದಲ್ಲಿ ಪೊಲೀಸನವರು ಯಾವುದೇ ವಸ್ತುವನ್ನು ಆರೋಪಿ ತೋರಿಸಿದ ಮೇರೆಗೆ ಜಪ್ತು ಮಾಡಿಲ್ಲ. ಈಗ ತೋರಿಸಿದ ನಿಪಿ-8 ರಲ್ಲಿ ನನ್ನ ರುಜು ಇದೆ. ಸಾಕ್ಷಿಯ ರುಜುವನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು. ನಿಪಿ-9 ರಿಂದ 11 ಛಾಯಾಚಿತ್ರದಲ್ಲಿ ನಾನು, ದೋಸಾ-4 ಮತ್ತು ಆರೋಪಿ ಕಾಣುತ್ತೇವೆ. ನಿಪಿ-8 ರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದ**

2. ದಿನಾಂಕ 02.02.2017 ರಂದು ದೋಸಾ-21 ರವರು ನನ್ನನ್ನು ಹಾಗೂ ದೋಸಾ-4 ರವರನ್ನು ಭಟ್ಕಳದ ನಗರ ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ಆರೋಪಿ ಆಗ ಹಾಜರಿದ್ದು ಘಟನೆಯ ಕಾಲಕ್ಕೆ ತಾನು ಧರಿಸಿದ್ದ ಶರ್ಟನ್ನು ಹಾಜರುಪಡಿಸುತ್ತೇನೆ ಎಂದು ಹೇಳಿದ್ದು ನಂತರ ಆತ ನಮ್ಮನ್ನು ಹಾಗೂ ದೊಸಾ-21 ರವರನ್ನು ತನ್ನ ಮನೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ನಂತರ ಆರೋಪಿತನ ಮನೆಯಲ್ಲಿ ಆರೋಪಿತನು ಘಟನೆಯ ಕಾಲದಲ್ಲಿ

ಧರಿಸಿದ್ದ ಅಂಗಿ ಹಾಜರುಪಡಿಸಿದ ಮೇರೆಗೆ ಅದನ್ನು ಜಪ್ತು ಪಡಿಸಿಕೊಂಡರು ಎಂದರೆ ಸರಿಯಾಗಿ ಗೊತ್ತಿಲ್ಲ. ಈಗ ತೋರಿಸಿದ ಮು.ಮಾಲು 3 ಅಂಗಿಯನ್ನು ಆಗ ಜಪ್ತು ಮಾಡಿದರು ಎಂದರೆ ನನಗೆ ನೆನಪಿಲ್ಲ. ಅದರ ಮೇಲೆ ಇರುವ ಚೀಟಿಯಲ್ಲಿ ನನ್ನ ರುಜು ಇದೆ. ಸಾಕ್ಷಿಯ ರುಜುವನ್ನು ಮು.ಮಾ 3/1(ಎ) ಎಂದು ಗುರುತಿಸಲಾಯಿತು. ನಂತರ ಆರೋಪಿ ನಮ್ಮನ್ನು ದೋಸಾ-8 ರವರ ಮನೆಗೆ ಕರೆದುಕೊಂಡು ಹೋಗಿ ಗುನ್ನಾ ಸ್ಥಳವನ್ನು ತೋರಿಸಿದ ಎಂದರೆ ಇರಬಹುದು ನನಗೆ ನೆನಪಿಲ್ಲ. ಆಗ ನಿಪಿ-8 ರಂತೆ ಪೊಲೀಸನವರು ಪಂಚನಾಮೆ ಮಾಡಿ ನನ್ನ ಸಹಿ ಪಡೆದರು ಎಂದರೆ ನಾನು ಸಹಿ ಹಾಕಿದ್ದೇನೆ. ಆ ಸಮಯದಲ್ಲಿ ನಿಪಿ-9 ರಿಂದ 11 ರಂತೆ ಛಾಯಾಚಿತ್ರಗಳನ್ನು ತೆಗೆದಿದ್ದಾರೆ ಎಂದರೆ ಹೌದು. ಆರೋಪಿಯ ಮನೆ ನನ್ನ ಮನೆಯಿಂದ 3-4 ಮನೆಯ ನಂತರ ಇದೆ. ಆ ಕಾರಣದಿಂದ ಆರೋಪಿಗೆ ಸಹಾಯ ಮಾಡಲು ಆರೋಪಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ನಾನು ಸಹಿ ಹಾಕಿದ್ದೇನೆ.

**ಪಾಟೀ ಸವಾಲುಃ ಆರೋಪಿತರ ವಕೀಲರಾದ ಶ್ರೀ ಎ.ಎ.ಎ ರವರಿಂದ**

3. ನಿಪಿ-9 ರಿಂದ 11 ಛಾಯಾಚಿತ್ರಗಳನ್ನು ಪಂಚನಾಮೆಯ ಸಮಯದಲ್ಲಿ ತೆಗೆದಿಲ್ಲ ಎಂದರೆ ಅದೇ ದಿನ ತೆಗೆದರು ಎಂದು ಸಾಕ್ಷಿ ನುಡಿದಿರುತ್ತಾರೆ.

**ಮರು ವಿಚಾರಣೆಃ ಸ.ಅ. ರವರಿಂದ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ